ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ,ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
(Quarterly News Letter)
ಜುಲೈ - ಸಪ್ಟೆಂಬರ್ 2013

ಮಿಂಚಂಚೆ: dvgtkvk@yahoo.com
Website: www.taralabalukvk.com
ಸಂಪುಟ-6 ಸಂಚಿಕೆ-4

## ಸಿಂಚನಕ್ಕೆ ಮುನ್ನ .......,

**ಆತ್ಮೀಯ ಬಂಧುಗಳೇ,**

'ಭರಪೂರ ಮಳೆ, ದೂರ ಮಾಡಿದೆ ಬರವ' ಎಂಬ ಸಂತೋಷ ಒಂದೆಡೆ, ಅತಿವೃಷ್ಟಿ-ಅನಾವೃಷ್ಟಿಯ ವೈಪರೀತ್ಯಗಳು ಇನ್ನೊಂದೆಡೆ. ಕಳೆದ ಮೂರು ಮಾಸಗಳು, ಅನೇಕ ಪರಿಣಾಮಕಾರಿ ಚಟುವಟಿಕೆಗಳಿಂದ ತುಂಬಿ ಹೋಗಿದ್ದವು. ಇಡೀ ಜಿಲ್ಲೆಯ 180 ಗ್ರಾಮ ಪಂಚಾಯ್ತಿಯ 1000 ಕ್ಕೂ ಮೀರಿದ ಜನಪ್ರತಿನಿಧಿಗಳು, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳಿಗೆ ಜೈವಿಕ ಇಂಧನ ಕುರಿತ ಒಂದು ದಿನದ ಒಟ್ಟು 28 ಕಾರ್ಯಗಾರಗಳು ನಿರೀಕ್ಷೆಗೂ ಮೀರಿದ ಸ್ಪಂದನೆಯಿಂದ ಕೂಡಿದ್ದವು. ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆಯನ್ನು ಮೀನುಗಾರಿಕಾ ಇಲಾಖೆಯ ಸಹಯೋಗದಲ್ಲಿ ಕೇಂದ್ರದಲ್ಲಿ ನಡೆಸಿದ್ದು ವಿಶೇಷವಾಗಿತ್ತು. ಜೊತೆಗೆ, ಮುಂಗಾರು ಋತುವಿನ ಮುಂಚೂಣಿ ಪ್ರಾತ್ಯಕ್ಷತೆಗಳು, ತಂತ್ರಜ್ಞಾನಗಳ ಕ್ಷೇತ್ರ ತುಲನೆಗಳು, ಪೂರಕ ತರಬೇತಿಗಳು ಯೋಜಿತ ರೀತಿಯಲ್ಲಿ ಸಾಗಿ ಬಂದಿವೆ.

ನಮ್ಮ ಕೇಂದ್ರದ ಒಡನಾಟವಿರುವ ರೈತರಾದ ಶ್ರೀ ಮರುಳಸಿದ್ದಪ್ಪ, ನಾಗರಕಟ್ಟೆ ಇವರಿಗೆ ಗುಜರಾತಿನಲ್ಲಿ ನಡೆದ Global Agriculture Meet ನಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಸನ್ಮಾನಿಸಿದ್ದು ಬಹಳ ವಿಶೇಷ. ಅದಕ್ಕೆ ಪೂರಕವೆಂಬಂತೆ, ಯಾದಗಿರಿ ಜಿಲ್ಲೆಯ ರೈತರೊಬ್ಬರು ನಮ್ಮ ತಜ್ಞರ ಮಾಹಿತಿಯಿಂದಾದ ಪ್ರಯೋಜನವನ್ನು ಪತ್ರದ ಮೂಲಕ ಸ್ಮರಿಸಿದ್ದು ಉಲ್ಲೇಖನೀಯ. ಜಿಲ್ಲೆಯ ವಿಸ್ತರಣಾ ಕಾರ್ಯಕರ್ತರಿಗೆ 3 ತರಬೇತಿಗಳನ್ನು ವಿಶೇಷವಾಗಿ ಹಮ್ಮಿಕೊಂಡಿದ್ದೆವು. ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ರಾಜ್ಯಮಟ್ಟದ ಕೃಷಿ ಕ್ಷೇತ್ರೋತ್ಸವದಲ್ಲಿ ಮಳಿಗೆಯೊಂದಿಗೆ ಭಾಗವಹಿಸಿ, ತಂತ್ರಜ್ಞಾನ ಪ್ರಸರಣೆಯನ್ನು ಹೆಚ್ಚು ಮಾಡಲು ಪ್ರಯತ್ನಿಸಿದೆವು. ಸನ್ಮಾನ್ಯ ಕೃಷಿ ಸಚಿವರು, ಶ್ರೀ ಕೃಷ್ಣಭೈರೇಗೌಡರು ನಾವು ಆಲೂರು ಗ್ರಾಮದಲ್ಲಿ ಕೈಗೊಂಡಿರುವ ಶೇಂಗಾ ತಳಿಗಳ ಬೆಳೆ ತಂತ್ರಜ್ಞಾನ ತುಲನೆಯ ಕ್ಷೇತ್ರಕ್ಕೆ ಭೇಟಿ ನೀಡಿ, ಪ್ರಶಂಸಿದ್ದು ಹೆಮ್ಮೆಯ ವಿಷಯ. ಇತನ್ಮಧ್ಯೆ 'ಸುಸ್ಥಿರ ಆದಾಯಕ್ಕೆ ಪರಿಸರ ಸ್ನೇಹಿ ಕೃಷಿ ಕ್ರಮಗಳು' ಎಂಬ ಮುಖ್ಯ ಶೀರ್ಷಿಕೆಯೊಂದಿಗೆ ಕೃಷಿ ಮಾಹಿತಿ ತಂತ್ರಜ್ಞಾನ ಸಪ್ತಾಹವನ್ನು ಕೃಷಿ ಇಲಾಖೆಯ ಸಹಯೋಗದಲ್ಲಿ ದಾವಣಗೆರೆ ಜಿಲ್ಲೆಯ 6 ತಾಲ್ಲೂಕುಗಳ 6 ಹಳ್ಳಿಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಿದೆವು.

ಜೊತೆಗೆ, ಹಣ್ಣುಗಳ ವನವನ್ನು ಕೃಷಿ ವಿಜ್ಞಾನ ಕೇಂದ್ರದ ಕದಳೀವನದಲ್ಲಿ ನಿರ್ಮಿಸುವೆಡೆಗೆ ಮೊದಲ ಹೆಜ್ಜೆ ಇರಿಸಿದ್ದೇವೆ. 48 ಜಾತಿಯ 200 ಹಣ್ಣಿನ ಗಿಡಗಳನ್ನು ನಾಟಿ ಮಾಡಲಾಗಿದೆ. ಬರುವ 5 ವರ್ಷಗಳಲ್ಲಿ, 500 ಜಾತಿಯ ಹಣ್ಣಿನ ಗಿಡಗಳನ್ನು ಸಂಗ್ರಹಿಸಿ ಇಲ್ಲಿ ಬೆಳೆಯಬೇಕೆಂದು ಆಶಯ ನಮ್ಮದಾಗಿದೆ.

ವಿದ್ಯಾರ್ಥಿಗಳು, ಸಂಶೋಧಕರು, ರೈತರು ಮತ್ತು ಆಸಕ್ತ ನಾಗರೀಕರಿಗೆ ಅಧ್ಯಯನ ಪೂರಕ ಫಲಭರಿತ ವನ ಇದಾಗುವುದಿದೆ. ಕಾಸರಗೋಡು ಮತ್ತು ವಿಟ್ಲದ CPCRI ನ ಹಿರಿಯ ವಿಜ್ಞಾನಿಗಳು ನಮ್ಮಲ್ಲಿಗೆ ಬಂದು ತೆಂಗು ಮತ್ತು ಅಡಿಕೆ ಬೆಳೆಗಾರರೊಂದಿಗೆ ನೇರ ಸಂವಾದ ನಡೆಸಿದ್ದು ಅತ್ಯಂತ ವಿಶೇಷ ಸಂದರ್ಭವಾಗಿತ್ತು. ನಿವೃತ್ತ ಲೆಫ್ಟಿನೆಂಟ್ ರಮೇಶ್ ರವರು ಬಾಗಲಕೋಟೆದಲ್ಲಿ ನಡೆಸಿದ ರಾಜ್ಯಮಟ್ಟದ ಕಾರ್ಯಗಾರದಲ್ಲಿ ನಮ್ಮ ತಜ್ಞರಿಗೆ Common Interest Group ಗಳ ರಚನೆಯಲ್ಲಿ ಸಂಸ್ಥೆಯ ಅನುಭವಗಳನ್ನು ಹಂಚಿಕೊಳ್ಳುವ ಅವಕಾಶ ದೊರಕಿತ್ತು. ಡಾ. ಖಾದರ್ ರವರೊಂದಿಗೆ ಕೇಂದ್ರದಲ್ಲಿ ಹಮ್ಮಿಕೊಂಡ ಸಂವಾದ ಕಾರ್ಯಕ್ರಮ ಕೂಡ ವಿಶೇಷವಾಗಿತ್ತು. ವಾರಪೂರ್ತಿ ಕದಳೀವನದಲ್ಲಿ ಪಾರ್ಥೇನಿಯಂ ಕಳೆಯನ್ನು ಕೀಳುವುದರ ಮೂಲಕ ಆಚರಿಸಿದ ಪಾರ್ಥೇನಿಯಂ ತಿಳುವಳಿಕಾ ಸಪ್ತಾಹ ಅರ್ಥಪೂರ್ಣವಾಗಿತ್ತು. ವಾಲ್ಮಿ, ಧಾರವಾಡ ಇವರ ಸಹಯೋಗದಲ್ಲಿ ಭತ್ತ ಬೆಳೆಗಾರರೊಂದಿಗೆ ಸಂವಾದ ಕಾರ್ಯಕ್ರಮ ಅನುಭವಪೂರಕವಾಗಿತ್ತು. ಕಣ್ವಕುಪ್ಪೆ ಗವಿ ಮಠದ ಶ್ರೀ ಕ್ಷೇತ್ರದಲ್ಲಿ 'ವಿಶ್ವ ಜೈವಿಕ ಇಂಧನ ದಿನ' ಆಚರಿಸಿದ್ದು ಸ್ಮರಣೀಯ. ನಿಕ್ರಾ ಯೋಜನೆಯ ಸಿದ್ದನೂರಿನಲ್ಲಿ ಹನ್ನೊಂದು ಸಾವಿರಕ್ಕೂ ಮೀರಿ ವಿವಿಧ ಗಿಡಗಳನ್ನು ನೆಡಿಸಿದ್ದು ಒಂದು ಪುಟ್ಟ ಸಾಧನೆಯೇ.

ಅಲ್ಲಿಲ್ಲಿ ಬೆಳೆನಾಶ, ಕೆಲವೆಡೆ ಒಳ್ಳೆಯ ಬಂಪರ್ ಬೆಳೆ, ಕೆಲವರ ಮುಖದಲ್ಲಿ ಸಂತಸ, ಹಲವರ ಮನದಲ್ಲಿ ತ್ರಾಸು, ಮಳೆ ಬಂದರೆ ಕೊಚ್ಚೆ-ಕೆಸರು, ಬಾರದಿರೆ ಭರ್ಜರಿ ಧೂಳು, ಗುಂಡಿಗಳ ನಡುವೆ ರಸ್ತೆಗಳು, ಇವೆಲ್ಲದರ ನಡುವೆ ನಿಲ್ಲದ ಯಾವುದೇ ಕಾರ್ಯಕ್ರಮಗಳು. ಹೀಗೆ ಸಾಗಿ ಬಂದ ಈ ಮೂರು ಮಾಸಗಳ ಪ್ರಯಾಣ ಸಾಕಷ್ಟು ಕಾರಣಗಳಿಂದಾಗಿ ಬಹಳ ದಿನ ನೆನಪಿನಲ್ಲಿ ಉಳಿಯುತ್ತದೆ. ಕದಳೀವನ ಮತ್ತು ಕೇಸರಿವನಗಳಲ್ಲಿ ಕ್ಷೇತ್ರಾಭಿವೃದ್ಧಿ ಚಟುವಟಿಕೆಗಳ ಕಡೆ ಈಗ ಹೆಚ್ಚಿನ ಗಮನ ಹರಿಸಲು ನಿಂತ ಮಳೆ ಅವಕಾಶ ನೀಡಿದೆ. ರೈತರ ಜಮೀನುಗಳಲ್ಲಿ ಹಮ್ಮಿಕೊಂಡಿರುವ ಕೃಷಿ ತಂತ್ರಜ್ಞಾನ ಚಟುವಟಿಕೆಗಳು ಈ ಬಾರಿ ತುಂಬಾ ಪರಿಣಾಮಕಾರಿಯಾಗಿ ಕಂಡು ಬಂದಿವೆ. ಕೃಷಿಕರೊಂದಿಗಿನ ಕೇಂದ್ರದ ಬಾಂಧವ್ಯ ಮತ್ತಷ್ಟು ಬಲಗೊಳ್ಳುತ್ತಾ ಸಾಗಿದೆ. ಪ್ರಸಕ್ತ ಸಾಲಿನ ಕೊನೆಯ ಮೂರು ತಿಂಗಳುಗಳು ಸಹ ಚಟುವಟಿಕೆಗಳಿಂದ ಕೂಡಿವೆ. ಈ ನಿಟ್ಟಿನಲ್ಲಿ ಮಸೆದಷ್ಟು ಪ್ರಕಾಶಿಸುವ ವಜ್ರಗಳಂತಿರಲಿ ನಮ್ಮ ಮನೋಭಾವ ಎಂದು ಆಶಿಸುತ್ತಾ, ನಿಮಗೆಲ್ಲರಿಗೂ ಶುಭಕೋರುವೆ.

ವಂದನೆಗಳು,
ಪ್ರೀತಿಯಿಂದ
ಡಾ. ದೇವರಾಜ ಟಿ.ಎನ್.

# ರೈತರಿಗೆ ಸನ್ಮಾನ



ಭೌತಿಕವಾಗಿ ನಮ್ಮೆಲ್ಲರನ್ನು
ಅಗಲಿದ ನೆಚ್ಚಿನ
ಡಾ. ಎಂ. ಎನ್. ಕುಲಕರ್ಣಿ ಸರ್‌ಗೆ
ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 9–10 ಸಪ್ಟೆಂಬರ್ 2013 ರಲ್ಲಿ ಗುಜರಾತ್ ಸರ್ಕಾರ, ಗಾಂಧಿ ನಗರದಲ್ಲಿ ಹಮ್ಮಿಕೊಂಡಿದ್ದ 'Vibrant Gujarat Global Agriculture Summit' ನಲ್ಲಿ ನಮ್ಮ ಕೇಂದ್ರದಿಂದ ಮುಂಚೂಣಿ ಪ್ರಾತ್ಯಕ್ಷಿಕೆ ಕೈಗೊಂಡ ರೈತರಾದ ಶ್ರೀ ಮರುಳಸಿದ್ದಪ್ಪ ದಂಪತಿಗಳು, ನಾಗರಕಟ್ಟೆ, ದಾವಣಗೆರೆ ತಾ. ಇವರು 'ಸಮಗ್ರ ಕೃಷಿ ಪದ್ಧತಿ ಮತ್ತು ಸಾವಯವ ಕೃಷಿ ವಿಭಾಗ' ದಲ್ಲಿ ಪ್ರಶಸ್ತಿ ಪಡೆದಿರುತ್ತಾರೆ.

# ಕೃಷಿ ತಂತ್ರಜ್ಞಾನ ಮಾಹಿತಿ ಸಪ್ತಾಹ

ಕೃಷಿ ಇಲಾಖೆ, ದಾವಣಗೆರೆ, ಆತ್ಮಾ ಯೋಜನೆ, ಜಿಲ್ಲಾ ಕೃಷಿಕ ಸಮಾಜ ಹಾಗೂ ಸರ್ಕಾರೇತರ ಸಂಸ್ಥೆಗಳ ಸಹಯೋಗದಲ್ಲಿ ಕೃಷಿ ತಂತ್ರಜ್ಞಾನ ಮಾಹಿತಿ ಸಪ್ತಾಹವನ್ನು 'ಸುಸ್ಥಿರ ಆದಾಯಕ್ಕೆ ಪರಿಸರ ಸ್ನೇಹಿ ಕೃಷಿ ಕ್ರಮಗಳು' ಎಂಬ ಮೂಲ ವಿಷಯವಾಗಿ ಜಿಲ್ಲೆಯ 6 ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮಗಳನ್ನು ತಾಲ್ಲೂಕಿನ ಸನ್ಮಾನ್ಯ ಶಾಸಕರುಗಳು ಉದ್ಘಾಟಿಸಿದರು



ಕೆ. ಗಾಣದಕಟ್ಟೆ, ಚನ್ನಗಿರಿ ತಾಲ್ಲೂಕು



ನೀರ್ಥಡಿ, ದಾವಣಗೆರೆ ತಾಲ್ಲೂಕು



ಕಣಿವೇಹಳ್ಳಿ, ಹರಪನಹಳ್ಳಿ ತಾಲ್ಲೂಕು



ಕೊಪ್ಪ, ಹರಿಹರ ತಾಲ್ಲೂಕು



ಸಾಸ್ವೇಹಳ್ಳಿ, ಹೊನ್ನಾಳಿ ತಾಲ್ಲೂಕು



ರಂಗಾಪುರ, ಜಗಳೂರು ತಾಲ್ಲೂಕು

# ವಿಸ್ತರಣಾ ಅಧಿಕಾರಿಗಳಿಗೆ ತರಬೇತಿ



ದಿನಾಂಕ 27–8–2013 ರಂದು ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ 'ಅಡಿಕೆ ಮತ್ತು ಬಾಳೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ' ಬಗ್ಗೆ ತರಬೇತಿ.



ದಿನಾಂಕ 16–9–2013 ರಂದು ಕೃಷಿ ಇಲಾಖೆ, ಹರಪನಹಳ್ಳಿ ತಾಲ್ಲೂಕಿನ ರೈತ ಅನುವುಗಾರರಿಗೆ 'ಹಿಂಗಾರು ಬೆಳೆಗಳಲ್ಲಿ ಆಧುನಿಕ ಉತ್ಪಾದನಾ ತಾಂತ್ರಿಕತೆಗಳ' ಬಗ್ಗೆ ತರಬೇತಿ.



ದಿನಾಂಕ 27–9–2013 ರಂದು ಕೃಷಿ ಇಲಾಖೆ, ಚನ್ನಗಿರಿ ಮತ್ತು ಜಗಳೂರು ತಾಲ್ಲೂಕಿನ ರೈತ ಅನುವುಗಾರಿಗೆ 'ಹಿಂಗಾರು ಬೆಳೆಗಳಲ್ಲಿ ಸಮಗ್ರ ಪೋಷಕಾಂಶ ಮತ್ತು ರೋಗ ಮತ್ತು ಕೀಟ ನಿರ್ವಹಣೆ' ಬಗ್ಗೆ ತರಬೇತಿ ಹಮ್ಮಿಕೊಳ್ಳಾಗಿತ್ತು.

# ರೈತರು ಮತ್ತು ವಿಜ್ಞಾನಿಗಳ ಸಂವಾದ ಕಾರ್ಯಕ್ರಮಗಳು



ದಿನಾಂಕ 8–7–2013 ರಂದು ಕರುಣಾ ಜೀವ ಕಲ್ಯಾಣ ಟ್ರಸ್ಟ್, ದಾವಣಗೆರೆ ಇವರ ಸಹಯೋಗದಲ್ಲಿ 'ಕೃಷಿಯಲ್ಲಿನ ಪ್ರಸ್ತುತ ಸಮಸ್ಯೆಗಳು ಮತ್ತು ಅವುಗಳ ನಿರ್ವಹಣೆ' ಎಂಬ ವಿಷಯದಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ವಿಜ್ಞಾನಿ ಡಾ. ಖಾದರ್ ಭಾಗವಹಿಸಿದ್ದರು.



ದಿನಾಂಕ 3–8–2013 ರಂದು `Domestic Waste Management' ಬಗ್ಗೆ ತಜ್ಞರ ಮತ್ತು ನಾಗರೀಕರ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 26–8–2013 ರಂದು ವಾಲ್ಮಿ, ಧಾರವಾಡ ಇವರ ಸಹಭಾಗಿತ್ವದಲ್ಲಿ 'ಭತ್ತದ ಬೆಳೆಯಲ್ಲಿ ಪ್ರಸ್ತುತ ಸಮಸ್ಯೆಗಳ ನಿರ್ವಹಣೆ ಮತ್ತು ನಿರೀಕ್ಷೆಗಳ' ಬಗ್ಗೆ ರೈತರ ಮತ್ತು ವಿಜ್ಞಾನಿಗಳ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 25–9–2013 ರಂದು CPCRI, ಕಾಸರಗೋಡು ಪ್ರಾಯೋಜಿತ 'ಸಂಶೋಧಕರ–ರೈತರ–ವಿಸ್ತರಣಾ ಅಧಿಕಾರಿಗಳ' ಸಂವಾದ ಕಾರ್ಯಕ್ರಮವನ್ನು 'ಅಡಿಕೆ ಮತ್ತು ತೆಂಗಿನ ಬೆಳೆಗಳ' ಬಗ್ಗೆ ಹಮ್ಮಿಕೊಳ್ಳಲಾಗಿತ್ತು.

# ವಿಶೇಷ ದಿನಾಚರಣೆಗಳು



ದಿನಾಂಕ 10-7-2013 ರಂದು ಮೀನುಗಾರಿಕೆ ಇಲಾಖೆ, ದಾವಣಗೆರೆ ಇವರ ಸಹಯೋಗದಲ್ಲಿ 'ರಾಷ್ಟ್ರೀಯ ಮೀನು ಕೃಷಿಕರ ದಿನ' ಆಚರಿಸಲಾಯಿತು.



ದಿನಾಂಕ 13-8-2013 ರಂದು ಜಿಲ್ಲಾ ಜೈವಿಕ ಇಂಧನ ಅಭಿವೃದ್ಧಿ ಸಮಿತಿ, ದಾವಣಗೆರೆ ಇವರ ಸಹಯೋಗದಲ್ಲಿ 'ವಿಶ್ವ ಜೈವಿಕ ಇಂಧನ ದಿನಾಚರಣೆ' ಯನ್ನು ಕಣ್ವಕುಪ್ಪೆ ಗವಿಮಠ ಶ್ರೀ ಕ್ಷೇತ್ರ, ಜಗಳೂರು ತಾಲ್ಲೂಕಿನಲ್ಲಿ ಹಮ್ಮಿಕೊಳ್ಳಲಾಗಿತ್ತು.



ದಿನಾಂಕ 16-22 ಆಗಸ್ಟ್ 2013 ರಲ್ಲಿ 'ಪಾರ್ಥೇನಿಯಂ ಕಳೆ ನಿರ್ಮೂಲನಾ ಸಪ್ತಾಹ'ವನ್ನು ಕೇಂದ್ರದ ಆವರಣದಲ್ಲಿ ಪಾರ್ಥೇನಿಯಂ ಕಳೆ ತೆಗೆಯುವುದರ ಮೂಲಕ ಆಚರಿಸಲಾಯಿತು.

# ಹಮ್ಮಿಕೊಂಡ ಕ್ಷೇತ್ರೋತ್ಸವ




ದಿನಾಂಕ 28-9-2013 ರಂದು ದಾವಣಗೆರೆ ತಾ. ಆಲೂರು ಗ್ರಾಮದಲ್ಲಿ 'ಶೇಂಗಾ ಬೆಳೆಯಲ್ಲಿ ವಿವಿಧ ತಳಿಗಳ ತುಲನೆ' ಬಗ್ಗೆ ಹಮ್ಮಿಕೊಂಡಿದ್ದ ಕ್ಷೇತ್ರಪ್ರಯೋಗದ ಕ್ಷೇತ್ರೋತ್ಸವ.



ಸನ್ಮಾನ್ಯ ಶ್ರೀ ಕೃಷ್ಣಭೈರೇಗೌಡ, ಕೃಷಿ ಸಚಿವರು, ಕರ್ನಾಟಕ ಸರ್ಕಾರ ಇವರು ದಾವಣಗೆರೆ ತಾ॥ ಆಲೂರು ಗ್ರಾಮದಲ್ಲಿ ಹಮ್ಮಿಕೊಂಡಿದ್ದ "ಶೇಂಗಾ ಬೆಳೆಯ ವಿವಿಧ ತಳಿಗಳ ಇಳುವರಿ ಸಾಮರ್ಥ್ಯ" ತಾಕಿನ ರೈತರೊಂದಿಗೆ ಚರ್ಚಿಸುತ್ತಿರುವುದು.

# ಕೃಷಿ ವಸ್ತು ಪ್ರದರ್ಶನಗಳು





ದಿನಾಂಕ 13-8-2013 ರಂದು 'ವಿಶ್ವ ಜೈವಿಕ ಇಂಧನ ದಿನಾಚರಣೆ' ಅಂಗವಾಗಿ ಕಣ್ವಕುಪ್ಪೆ ಗವಿಮಠ ಶ್ರೀ ಕ್ಷೇತ್ರದಲ್ಲಿ.



ದಿನಾಂಕ 14-9-2013 ರಂದು 'ರಾಜ್ಯಮಟ್ಟದ ಭೂಚೇತನ ಕ್ಷೇತ್ರೋತ್ಸವ' ಸಂದರ್ಭದಲ್ಲಿ ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ, ದಾವಣಗೆರೆ ತಾ.

# Farmers Feedback





ಕೇಂದ್ರದ ಬೇಸಾಯ ತಜ್ಞರ ಮಾರ್ಗದರ್ಶನದಲ್ಲಿ ಹತ್ತಿ ಬೆಳೆಯನ್ನು ಲಾಭದಾಯಕವಾಗಿ ಬೆಳೆದ ಶ್ರೀ ಬಸವರಾಜ, ಬಿಳ್ಹಾರ ಗ್ರಾಮ, ಯಾದಗಿರಿ ಜಿಲ್ಲೆ ಇವರು ಪತ್ರದ ಮೂಲಕ ಅಭಿನಂದನಾ ಪತ್ರ ಬರೆದಿರುತ್ತಾರೆ.

# ರೈತರಿಗೆ ಮುನ್ಸೂಚನೆಗಳು

### ಬೇಸಾಯ ಶಾಸ್ತ್ರ:

- ❖ ಮೆಕ್ಕೆಜೋಳವನ್ನು ಕಟಾವು ಮಾಡಿದ ನಂತರ, ಬೆಳೆ ಉಳಿಕೆಗಳನ್ನು ಭೂಮಿಯಲ್ಲಿ ಸೇರಿಸಿ, ಬೆಂಕಿಯಿಡುವುದನ್ನು ನಿಲ್ಲಿಸಬೇಕು.
- ❖ ಸೂರ್ಯಕಾಂತಿಯಲ್ಲಿ ಹೂ ಬಿಡುವ ಹಂತದಲ್ಲಿ ಬೋರಾಕ್ಸ್ –0.1 1 % (1 ಗ್ರಾಂ / ಲೀ.) ನೀರಿನಲ್ಲಿ ಕರಗಿಸಿ ಕೊಡುವುದರಿಂದ ಕಾಳು ಸಂಪೂರ್ಣವಾಗಿ ಕಟ್ಟುತ್ತದೆ.
- ❖ ಹೊಸದಾಗಿ ಕಬ್ಬನ್ನು ನಾಟಿ ಮಾಡುವ ಮೊದಲು ಮಣ್ಣಿನ ಪರೀಕ್ಷೆ ಮಾಡಿಸುವುದು ಸೂಕ್ತ. ಮಣ್ಣಿನ ಪರೀಕ್ಷೆಯಾದ ಮೇಲೆ ರಾಸಾಯನಿಕ ಗೊಬ್ಬರವನ್ನು ಕೊಡಬೇಕು.

**ಕಬ್ಬಿನಲ್ಲಿ ಗೊಬ್ಬರ:**

ರಸಾಯನಿಕ ಗೊಬ್ಬರ : 250 ಕೆಜಿ (ಸಾರಜನಕ): 75 ಕೆಜಿ (ರಂಜಕ): 190 (ಪೊಟ್ಯಾಷ್)

ನಾಟಿ ಮಾಡುವಾಗ ಶೇ. 10 % ಸಾರಜನಕ ಪೂರ್ತಿ ರಂಜಕ ಹಾಗೂ ಪೊಟ್ಯಾಷ್ ಒದಗಿಸಬೇಕು.

ಉಳಿದ ಸಾರಜನಕವನ್ನು ನಾಟಿ ಮಾಡಿದ 6ನೇ ವಾರಕ್ಕೆ– 20 % 10ನೇ ವಾರಕ್ಕೆ –30 % 14ನೇ ವಾರಕ್ಕೆ – 40 %

**ಸಸ್ಯ ಸಂರಕ್ಷಣೆ:**

**ಬಸವನಹುಳು:** ದಾವಣಗೆರೆ ಜಿಲ್ಲೆಯಾದ್ಯಂತ ಅಡಿಕೆ, ತೆಂಗು, ಬಾಳೆ, ಎಲೆಬಳ್ಳಿ ಮತ್ತು ತರಕಾರಿ ಬೆಳೆಗಳಲ್ಲಿ ಬಸವನಹುಳು ಬಾಧೆ ಹೆಚ್ಚಾಗಿ ಕಂಡು ಬಂದು ಇಳುವರಿಯಲ್ಲಿ ಹಾನಿ ಮಾಡುತ್ತಿದೆ.

**ನಿರ್ವಹಣೆ :**
- ಪ್ರತಿ ಎಕರೆಗೆ 10 ಕೆಜಿ ಅಕ್ಕಿ ತೌಡು ಮತ್ತು 3 ಲೀ ನೀರು ಮತ್ತು 2 ಕೆಜಿ ಬೆಲ್ಲ ಬೇಕು.
- ಬೆಲ್ಲದ ಪಾಕ ಮಾಡಿ ಅಕ್ಕಿ ತೌಡಿಗೆ ಬೆರೆಸಿ 48 ಗಂಟೆ ಬಿಡಬೇಕು, ನಂತರ ಈ ಮಿಶ್ರಣಕ್ಕೆ ಮಿಥೋಮಿಲ್ 100 ಗ್ರಾಂ ಸೇರಿಸಿ ಸಂಜೆ ವೇಳೆಗೆ ಅಲ್ಲಲ್ಲಿ ಇಡಬೇಕು. ಮಾರನೆಯ ದಿನ ಬೆಳಗ್ಗೆ ಬಸವನಹುಳು ವಿಷವನ್ನು ತಿಂದು ಸತ್ತಿರುತ್ತವೆ.
- ಸತ್ತ ಹುಳುಗಳನ್ನು ಆರಿಸಿ ಗುಂಡಿಯಲ್ಲಿ ಹಾಕಿ ಮುಚ್ಚಬೇಕು.
- ಹೊಲ / ತೋಟಗಳಲ್ಲಿ ವಿಷದೂಟ ಹಾಕಿದ ಮೇಲೆ ಜಾನುವಾರುಗಳು ಹತ್ತಿರ ಬರಬಾರದಂತೆ ಎಚ್ಚರವಹಿಸಬೇಕು.

**ಭತ್ತ:** **ಎಲೆ ಕವಚ ಕೊಳೆ ರೋಗ:**

**ಲಕ್ಷಣ:** ಗದ್ದೆಯಲ್ಲಿ ಹೆಚ್ಚಾಗಿ ನೀರು ನಿಲ್ಲುವಂತ ತಗ್ಗಿನ ಸ್ಥಳಗಳಲ್ಲಿ ರೋಗದ ಬಾಧೆ ಕಂಡು ಬರುತ್ತದೆ. ಎಲೆ ಕವಚ ಮತ್ತು ಕಾಂಡದ ಮೇಲೆ ಕಂದು ಬಣ್ಣದ ಮಚ್ಚೆಗಳು ಕಾಣಿಸುತ್ತವೆ. ಕೆಲವು ಸಲ ಚುಕ್ಕೆಗಳಲ್ಲಿ ಸ್ಲೀರೋಷಿಯಂ ಕಣಗಳು ಕಂಡು ಬರುತ್ತದೆ. ವಾತಾವರಣದಲ್ಲಿ ಆರ್ದತೆ ಹೆಚ್ಚಿದಾಗ ಎಲೆಯು ಒಣಗುತ್ತದೆ.

**ಹತೋಟಿ:**
- ಸರಿಯಾದ ಗಿಡಗಳ ಅಂತರ ಅಂತರ ಕಾಪಾಡಬೇಕು.
- ಬದುಗಳ ಮೇಲಿರುವ ಕಳೆಗಳನ್ನು ತೆಗೆದು ಮಿತವಾಗಿ ಸಾರಜನಕ ಬಳಕೆ ಮಾಡಬೇಕು.
- ನಾಟಿಯಾದ 30 ದಿನಗಳ ನಂತರ ಸುಡೊಮೆನಾಸ್ ಫ್ಲುರೊಸೆನ್ಸ್ 5 ಕೆಜಿ / ಹೆ. ಗೆ ಬಳಸಬೇಕು.
- ಹೆಕ್ಸಕೊನಜೋಲ್ 5 ಇಸಿ 2 ಮಿಲೀ ಅಥವಾ ವಾಲಿಡಮೈಸಿನ್ 2 ಮಿಲೀ ಪ್ರತಿ ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

**ದುಂಡಾಣು ಅಂಗಮಾರಿ ರೋಗ:**

- ❖ ಹೆಚ್ಚಿನ ಶಾಖ ಮತ್ತು ಆರ್ಧತೆಯಲ್ಲಿ ರೋಗದ ಬಾಧೆ ಹೆಚ್ಚಾಗಿರುತ್ತದೆ.
- ❖ ಎಲೆಯ ತುದಿ ಮತ್ತು ಬದಿಗಳ ಅಂಚುಗಳು ಒಣಗಿರುತ್ತವೆ. ರೋಗ ಹೆಚ್ಚಾದಾಗ ಎಲೆಯ ತುದಿಯಲ್ಲಿ ನೇರಳೆ ಬಣ್ಣದ ಹನಿಗಳು ಕಾಣುತ್ತವೆ.

**ಹತೋಟಿ :**
- ■ ಬಿತ್ತನೆಗೆ ರೋಗ ರಹಿತ ಬೀಜಗಳನ್ನು ಬಳಸಬೇಕು.
- ■ ಬಾಧೆ ಕಂಡಾಗ ತಾಮ್ರದ ಅಕ್ಸಿಕ್ಲೋರೈಡ್ 2 ಗ್ರಾಂ ಮತ್ತು ಸ್ಟ್ರೆಪ್ಟೊಸೈಕ್ಲಿನ್ 0.5 ಗ್ರಾಂ ಪ್ರತಿ ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

**ಕಡಲೆ:** **ಮಣ್ಣು ಫಲವತ್ತತೆ:**

- ಜೈವಿಕ ಗೊಬ್ಬರಗಳಾದ ರೈಜೋಬಿಯಂ, ಅಝೋಸ್ಪಿರಿಲಂ, VAM ಮತ್ತು ರಂಜಕ ಕರಗಿಸುವ ಅಣುಜೀವಿಗಳನ್ನು ಬೀಜಗಳೊಡನೆ ಲೇಪಿಸಿ ಬಿತ್ತನೆ ಮಾಡುವುದು ಸೂಕ್ತ.
- ಹಿಂಗಾರಿ ಬೆಳೆ ಬಿತ್ತನೆಗೂ ಮುಂಚೆ ಮಣ್ಣು ಪರೀಕ್ಷೆ ಮಾಡಿಸಿ, ಫಲಿತಾಂಶದ ಆಧಾರದ ಮೇಲೆ ರಸಗೊಬ್ಬರಗಳನ್ನು ಉಪಯೋಗಿಸುವುದು.
- ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಸಾವಯವ ಗೊಬ್ಬರಗಳನ್ನು ಉಪಯೋಗಿಸುವುದು.
- ಮುಂಗಾರು ಬೆಳೆ ಕಟಾವು ನಂತರ ಬೆಳೆಯುಳಿಕೆಗಳನ್ನು ಮಣ್ಣಿನಲ್ಲಿ ಚೆನ್ನಾಗಿ ಬೆರಸಬೇಕು.

**ಕಾಯಿಕೊರಕ:** ಮರಿಹುಳುಗಳು ಎಲೆಯನ್ನು ಕೆರೆದು ತಿನ್ನುವುದರಿಂದ ಎಲೆಯ ಮೇಲೆ ಬಿಳಿ ಮಚ್ಚೆಗಳು ಕಂಡುಬರುತ್ತವೆ. ಕೀಟ ಬಾಧೆ ಜಾಸ್ತಿಯಾದಾಗ ಗಿಡಗಳು ಸಂಪೂರ್ಣವಾಗಿ ಒಣಗುತ್ತವೆ. ಕಾಯಿ ಕಟ್ಟುವ ಹಂತದಲ್ಲಿ ಒಂದು ಕೀಟವು ಸುಮಾರು 20–30 ಕಡಲೆ ಕಾಯಿಗಳನ್ನು ನಾಶ ಮಾಡುತ್ತದೆ.

**ಹತೋಟಿ:**
- ♦ ಮಾಗಿ ಉಳುಮೆ ಮಾಡಬೇಕು.
- ♦ ಬಿತ್ತುವಾಗ ಪ್ರತಿ 6 ಸಾಲು ಕಡಲೆಯ ನಂತರ ಒಂದು ಸಾಲು ಜೋಳ ಅಥವಾ ಸೂರ್ಯಕಾಂತಿ ಅಥವಾ ಕೊತ್ತಂಬರಿ ಬಿತ್ತಬೇಕು.
- ♦ ಎಕರೆಗೆ 10 ರಂತೆ ಕವಲೊಡೆದ ಟೊಂಗೆಗಳನ್ನು ನೆಡಬೇಕು.
- ♦ ಎಕರೆಗೆ 2 ರಂತೆ ಮೋಹಕ ಬಲೆ ಬಳಸಿ ಕೀಟ ಸಮೀಕ್ಷೆ ಮಾಡಿ ತತ್ತಿನಾಶಕಗಳಾದ ಮಿಥೋಮಿಲ್ 0.6 ಗ್ರಾಂ ಅಥವಾ ಪ್ರೊಪೊನೊಫಾಸ್ 3 ಮಿಲೀ. ಪ್ರತಿ ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.
- ♦ ಬಾಧೆ ಹೆಚ್ಚಾದಾಗ ರೈನಾಕ್ಷಿಪಿಯರ್ 20 ಎಸ್‌ಪಿ 0.15 ಮಿಲೀ. ಅಥವಾ ಇಂಡಾಕ್ಸಿಕಾರ್ಬ್ 14.5 ಎಸ್‌ಸಿ 0.3 ಮಿಲೀ ಪ್ರತಿ ಲೀ. ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

**ಅಡಿಕೆ :**
- ಪ್ರಸ್ತುತ ವರ್ಷ ಅಧಿಕ ಮಳೆಯಿಂದಾಗಿ ಅಡಿಕೆ ತೋಟಗಳಲ್ಲಿ ಕೊಳೆರೋಗದ ಬಾಧೆ ಹೆಚ್ಚಾಗಿದ್ದು, ಮುನ್ನಚ್ಚರಿಕೆಯಾಗಿ ಹಿಂಗಾರು ಮಳೆ ಬೀಳುವ ಸಮಯದಲ್ಲಿ ಅಂದರೆ ಅಕ್ಟೋಬರ್ – ನವೆಂಬರ್ ತಿಂಗಳಲ್ಲಿ ಪ್ರತಿ ಗಿಡಕ್ಕೆ 10:26:26–100ಗ್ರಾಂ, ಎಮ್ ಓ ಪಿ–100 ಗ್ರಾಂ, ಜಿಂಕ್ ಸಲ್ಫೇಟ್–50 ಗ್ರಾಂ, ಬೋರಾಕ್ಸ್ –30 ಗ್ರಾಂ ಕೊಡಬೇಕು. ನಂತರ ಹಸಿರೆಲೆಗೊಬ್ಬರ ಬೀಜಗಳಾದ ಸೆಣಬು, ಡಯಾಂಚ, ಅವರೆ, ಅಲಸಂದಿ ಇತರೆ ಬೆಳೆಗಳನ್ನು ಬೆಳೆದರೆ ಉತ್ತಮ.

**ತೆಂಗು:** ತೆಂಗಿನ ಕಾಯಿಗಳ ದರದಲ್ಲಿ ಏರಿಕೆಯಾಗಿರುವುದು ಹರ್ಷದ ಸಂಗತಿ, ಪ್ರತಿ ಗಿಡಕ್ಕೆ ಡಿಎಪಿ –1.0 ಕೆಜಿ, ಎಮ್ ಓ ಪಿ –2.5 ಕೆಜಿ,, ಜಿಂಕ್ ಸಲ್ಫೇಟ್ – 50 ಗ್ರಾಂ, ಬೋರಾಕ್ಸ್– 50 ಗ್ರಾಂ, ಉಪ್ಪು–1.0 ಕೆಜಿ (15 ವರ್ಷ ಮೇಲ್ಪಟ್ಟ ಗಿಡಗಳಿಗೆ) ಕೊಡಬೇಕು.

**ಮೀನುಕೃಷಿ :** ಬೆಳೆಯುತ್ತಿರುವ ಮೀನುಗಳಿಗೆ, ಒಟ್ಟು ತೂಕದ ಆಧಾರದ ಮೇಲೆ (3%) ಹೊರಗಿನ ಆಹಾರವನ್ನು ನೀಡಬೇಕು. ಕನಿಷ್ಟ 5 % ನೀರನ್ನು ವಾರಕ್ಕೊಮ್ಮೆಯಾದರೂ ಕೊಳಕ್ಕೆ ಹೊಸದಾಗಿ ಸೇರಿಸಬೇಕು. ಮೀನುಗಳ ಆಹಾರ ಸೇವನೆ, ಈಜಾಟ ಸರಿಯಾಗಿ ಇದೆಯೇ ಎಂಬುದನ್ನು ಪರಿಶೀಲಿಸಬೇಕು.

ತೆರೆದ–ಅಂಚೆ

ಗೆ,

ಪ್ರಧಾನ ಸಂಪಾದಕರು: ಡಾ. ದೇವರಾಜ ಟಿ.ಎನ್.
ಸಹ ಸಂಪಾದಕರು: ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್., ಶ್ರೀ ಹನುಮಂತನಗೌಡರ.
ಪ್ರಕಾಶಕರು : ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಜೌಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ